# ಪಠ್ಯ ಪೂರಕ ಅಧ್ಯಯನ

## 3. ನನ್ನಾಸೆ – ಇಂದುಮತಿ ಲಮಾಣಿ

### ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಅಜ್ಞಾನ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ?

   **ಉತ್ತರ** : ಅಜ್ಞಾನ ತೊಲಗಿಸಲು ಕವಯಿತ್ರಿ ವಾಗ್ದೇವಿಯ ಕೈಯಲ್ಲಿಯ ಗ್ರಂಥವಾಗಲು ಬಯಸಿದ್ದಾರೆ.

2. ಸದಾ ಚಿಮ್ಮುವ ಚಿಲುಮೆಯಾಗಬೇಕು, ಏಕೆ?

   **ಉತ್ತರ** : ಸದಾ ಚಿಮ್ಮುತ್ತಲಿರುವ ಚಿಲುಮೆಯಾಗಬೇಕು. ಏಕೆಂದರೆ ದಾಹಗೊಂಡವರ ತನುವ ತಣಿಸಲು.

3. ನನ್ನಾಸೆ ಕವನದಲ್ಲಿ ಕವಯಿತ್ರಿಯವರ ಆಸೆಗಳೇನು?

   **ಉತ್ತರ** : ನನ್ನಾಸೆ ಕವನದಲ್ಲಿ ಕವಯಿತ್ರಿಯವರ ಆಸೆಗಳೆಂದರೆ ಬೆಳಕು ನೀಡುವ ಬತ್ತಿ ನಾನಾಗಬೇಕು. ಮರವಾಗಿ ಪುಣ್ಯವಂತರಿಗೆ ನೆರಳಾಗಬೇಕು. ಸದಾ ಚಿಮ್ಮುತ್ತಲಿರುವ ಚಿಲುಮೆಯಾಗಿ, ದಾಹಗೊಂಡವರ ತನುವ ತಣಿಸಬೇಕು. ಅಳುವ ಕಂದನ ನಗಿಸಲು ಅಮ್ಮನ ಕಂಠದ ಜೋಗುಳ ನಾನಾಗಬೇಕು. ಮಾನವನ ಅಜ್ಞಾನತೆ ತೊಲಗಿಸಲು ವಾಗ್ದೇವಿಯ ಕೈಯಲ್ಲಿಯ ಗ್ರಂಥವಾಗಿ ಧನ್ಯಳಾಗಬೇಕು. ದಿಕ್ಕಿಲ್ಲದೆ ನರಳಾಡುವ ದೀನರ ಊರುಗೋಲು ನಾನಾಗಬೇಕು. ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ ಅಂತ್ಯ ನನ್ನದಾಗಬೇಕು.